ಕಡೂರು ಡಿಸ್ಟ್ರಿಕ್ಟು.

ಮಳೆ.—ತಾಲ್ಲೂಕು ಮತ್ತು ಡಿಸ್ಟ್ರಿಕ್ಟು ಹೆಡ್ ಕ್ವಾರ್ಟರ್‌ನಲ್ಲಿ ಆಳೆಯಲ್ಪಟ್ಟ ಮಳೆಯ ಪರಿಮಾಣವು ಇದರಲ್ಲೀ ಕಾಣಿಸಿರುತ್ತೆ:—

	ಇಂ॥	ಸೆಂ॥		ಇಂ॥	ಸೆಂ॥
ತರೀಕೆರೆ ..	5	30	ಎಡೆಹಳ್ಳಿ ..	4	25
ಕೊಪ್ಪ ..	4	86	ಹಾಸನ ..	7	5
ಚಿಕ್ಕಮಗಳೂರು ..	11	98	ಬೇಲೂರು ..	5	56
ಕಡೂರು ..	2	59	ಮಂಜರಾಬಾದ್ ..	5	72
ಮೂಡಗೆರೆ ...	9	90	ಅರಸೀಕೆರೆ ..	2	13

ಪೀಡಾವಾದ ಧಾನ್ಯ.—ತರೀಕೆರೆ, ಕಡೂರು ಮತ್ತು ಬೇಲೂರು ಈ ತಾಲ್ಲೂಕುಗಳಲ್ಲಿ ಹುರಳಿ; ಕಡೂರು ತಾಲ್ಲೂಕಿನಲ್ಲಿ ರಾಗಿ, ಬರಗು, ತಂಬಾಕು; ಚಿಕ್ಕಮಗಳೂರು ವ ಹಾಸನ ತಾಲ್ಲೂಕುಗಳಲ್ಲಿ ಕಬ್ಬು; ಮಂಜರಾಬಾದ್ ವ ಬೇಲೂರು ತಾಲ್ಲೂಕಿನಲ್ಲಿ ಹರಳು; ಬೇಲೂರು ತಾಲ್ಲೂಕಿನಲ್ಲಿ ಅವರೆ; ತರೀಕೆರೆ ತಾಲ್ಲೂಕಿನಲ್ಲಿ ಹತ್ತಿ.

ಕಟುವಾದ ಫಸಲು.—ತರೀಕೆರೆ ತಾಲ್ಲೂಕಿನಲ್ಲಿ ಮೆದ್ದು ವ ಹೆಸರು; ತರೀಕೆರೆ ವ ಅರಸೀಕೆರೆ ತಾಲ್ಲೂಕಿನಲ್ಲಿ ಕೊತ್ತಂಬರಿ; ಕೊಪ್ಪ ವ ಮೂಡಗೆರೆ ತಾಲ್ಲೂಕಿನಲ್ಲಿ ಜೀಲಾಚಿ, ಕಾಫಿ ಮತ್ತು ಅಡಿಕೆ; ಚಿಕ್ಕಮಗಳೂರು ತಾಲ್ಲೂಕಿನಲ್ಲಿ ಬೆಳ್ಳುಳ್ಳಿ; ಚಿಕ್ಕಮಗಳೂರು ವ ಮಂಜರಾಬಾದ್ ತಾಲ್ಲೂಕಿನಲ್ಲಿ ಗಿಡ್ಡರಾಗಿ; ಕಡೂರು ತಾಲ್ಲೂಕಿನಲ್ಲಿ ಕಬ್ಬು, ಗೋಧಿ, ಬರಗು, ಮತ್ತು ಹರಳು; ಬೇಲೂರಿನಲ್ಲಿ ಯೆಳ್ಳು.

ಫಸಲಿನ ಸ್ಥಿತಿ.—ತರೀಕೆರೆ ವ ಮೂಡಗೆರೆ ತಾಲ್ಲೂಕಿನಲ್ಲಿ ಛಂದಾಗಿಯೂ ಕಡೂರು ತಾಲ್ಲೂಕಿನಲ್ಲಿ ಉತ್ತಮವಾಗಿಯೂ ಹಾಸನ ವ ಕೊಪ್ಪ ತಾಲ್ಲೂಕಿನಲ್ಲಿ ಮೊಫಕ್ ಆಗಿಯೂ ಚಿಕ್ಕಮಗಳೂರು ತಾಲ್ಲೂಕಿನಲ್ಲಿ ಸಾಧಾರಣವಾಗಿಯೂ ಇತರ ತಾಲ್ಲೂಕುಗಳಲ್ಲಿ ಉತ್ತಮವಾಗಿಯೂ ಇವೆ.

ಕಾಲಸ್ಥಿತಿ.—ಮಲ್‌ನಾಡ್ ಪ್ರಾಂತ್ಯ ಛಂದಾಗಿದೆ. ಕಡೂರು ವ ಅರಸೀಕೆರೆ ತಾಲ್ಲೂಕುಗಳಲ್ಲಿ ಮಳೆ ಬೇಕಾಗಿದೆ.

ಜನಾರೋಗ್ಯ.—ಸಾಧಾರಣವಾಗಿ ಚನ್ನಾಗಿದೆ. ಕಡೂರು ವ ತರೀಕೆರೆ ತಾಲ್ಲೂಕಿನಲ್ಲಿ ಕೆಲವರಿಗೆ ಉಖಾಲ್ ಜ್ವರಾಬ್ ತಗಲಿತ್ತು.

ಕಾಳ್ನಡೆ.—ಬಳ್ಳೀ ಸ್ಥಿತಿಯಲ್ಲಿವೆ. ಸದರೀ ಮೂಹೆಯಲ್ಲಿ 1,022 ಕಾಳ್ನಡೆಗಳನ್ನೂ ಅದರ ಹಿಂದಿನ ತಿಂಗಳಲ್ಲಿ 1,039 ಕಾಳ್ನಡೆಗಳನ್ನೂ ಹೋಗಿರುತವೆ.

ಜಮ್ಮಾ.—ಸಾಗುವಳಿ ಬಗ್ಗೆ 944—11—0 ರೂಪಾಯಿ ಕಂದಾಯ ಬಾಳುವ ಜವಿಾನು ತೆಗದುಕೊಳ್ಳಲ್ಪಟ್ಟಿತು; ರಾಜೀನಾಮೆ ಯಾವದೂ ಇಲ್ಲವು.

ದಾರಣೆ.—ಸ್ವಲ್ಪ ತಗ್ಗುತ್ತಲಿದೆ.

ಮಹಮ್ಮದಲ್ಲಿ, ಕೆ. ಬಿ.,
ಆ॥ಡಿ॥ ಕಮ್ಮಿಷನರ್.

ನೋಟೀಸ್.

ಧಾರವಾಡದ ಡಿಸ್ಟ್ರಿಕ್ಟು ಕೋರ್ಟಿನಲ್ಲಿ.

ಪಾರಸ್ ನಂಬರ್ 18—1884.

ಸ್ ೧864ನೇ ಇಸವಿಯ 20ನೇ ಆಕ್ಟಿನನ್ವಯ—ಜೀವೂಬಾಯಿ ಕೋಂ ವೆಂಕಟರಾವ್ ಪೋಚೆನಿ ಸಾಕೀ೯ ಧಾರವಾಡ ಯಿವರು ಮಾಡಿದ ಅರ್ಜಿಯ ಬಾಬತಿನಲ್ಲಿ ಸದರೀ ಜೀವೂಬಾಯಿ ಕೋಂ ವೆಂಕಟರಾವ್ ಪೋಚೆನಿ ಸಾಕೀ೯ ಮವುಜೆ ಧಾರವಾಡ, ತಾಲ್ಲೂಕು ಧಾರವಾಡ ಯಿವರು ಈ ಕೋರ್ಟಿಗೆ ಈ ಪ್ರಕಾರ ಅರ್ಜೀ ಕೊಟ್ಟಿರುತ್ತಾರಲ್ಲ:—

ಕೆಳಗೆ ಬರದ ಅಜ್ಞಾನ ಹುಡಗರ ಬಗ್ಗೆ ಸ್ ೧864ನೇ ಇಸವಿ 20ನೇ ಆಕ್ಟು ಪ್ರಕಾರ ಸಂರಕ್ಷಣೆದಾರ ಮಹಿ ಮಾಟುದಾರರನ್ನು ನೇಮಿಸಬೇಕು ಅಂತ.

1 ದತ್ತಾತ್ರಯ ವೆಂಕಟೇಶ, ವಯಸ್ಸು 14; ಪಾಂಡುರಂಗ ವೆಂಕಟೇಶ, ವಯಸ್ಸು 11, ಸಾಕೀ೯ ಧಾರವಾಡ.